

## ನಾಸಾ ಅರ್ಥ್ ಆ್ಯಸ್ ಆರ್ಟ್

ನಾಸಾದ ಈ ಆ್ಯಪ್ ವಿಜ್ಞಾನಕ್ಕಿಂತ ಸೌಂದರ್ಯಕ್ಕೆ ಒತ್ತು ನೀಡುತ್ತದೆ. ಭೂಮಿಯನ್ನೇ ಒಂದು ಕ್ಯಾನ್‌ವಾಸ್‌ನಂತೆ ಇಟ್ಟುಕೊಂಡು ಬಾಹ್ಯಾಕಾಶದ ಚಿತ್ರಗಳು ಕಂಗೊಳಿಸುತ್ತವೆ. ಇವು ಭೂಮಿಯನ್ನು ಪರಿಭ್ರಮಣ ಮಾಡುತ್ತಿರುವ ಒಟ್ಟು ಐದು ಉಪಗ್ರಹಗಳಿಂದ ಲಭ್ಯವಾದ ಚಿತ್ರಗಳು. ಈ ಉಪಗ್ರಹಗಳು ಬೆಳಕನ್ನು ತರಂಗಾಂತರದಲ್ಲಿ ಅಳೆಯುವುದರಿಂದ ಚಿತ್ರಗಳಿಗೆ ವರ್ಣಗಳು ದಟ್ಟವಾಗಿ ಮೆತ್ತಿಕೊಂಡು ಆಕರ್ಷಕವಾಗಿ ಕಾಣುತ್ತವೆ. ಚಿತ್ರಗಳಿಗೆ ಶೀರ್ಷಿಕೆಗಳು, ವಿವರಣೆಗಳು ಲಗತ್ತಾಗಿದ್ದು, ನಾಸಾ ಮಿಷನ್ ಪುಟಗಳಿಗೆ ಸಂಪರ್ಕವಿರುತ್ತದೆ. ಮರುಭೂಮಿ, ಮರಳುದಿಬ್ಬಗಳು, ಸರೋವರಗಳು, ನದಿಗಳು, ಜ್ವಾಲಾಮುಖಿ, ಪರ್ವತ ಶ್ರೇಣಿಗಳು, ದ್ವೀಪಗಳು ಮೊದಲಾದ ಚಿತ್ರಗಳ ಸಂಗ್ರಹವಿದ್ದು ಮೇಲಿಂದ ತೆಗೆದ ಮೋಡಗಳ ಚಿತ್ರವಿಚಿತ್ರ ಚಿತ್ರಗಳು ಮನ ಸೆಳೆಯುವಂತಿವೆ.

## ವಾಕ್ಸ್‌ಬಾಕ್ಸ್




ಪ್ರಪಂಚದಾದ್ಯಂತ ಇರುವ ಇತರ ವಾಕ್ಸ್‌ಬಾಕ್ಸ್ ಬಳಕೆದಾರರ ಆಡಿಯೊ ಕ್ಲಿಪಿಂಗ್‌ಗಳನ್ನು ಕೇಳಬಹುದು. ಅವರು ಅಪರಿಚಿತರಿದ್ದರೂ, ಅಂದರೆ ನಿಮ್ಮ ಸ್ನೇಹಿತರ ಪಟ್ಟಿಯಲ್ಲಿ ಇಲ್ಲದಿದ್ದರೂ ಕೇಳಬಹುದು. ಈ ಉಚಿತ ಐಫೋನ್ ಆ್ಯಪ್‌ನಿಂದ ನೀವು ಆಡಿಯೋ ಕ್ಲಿಪ್‌ಗಳನ್ನು ಅಪ್‌ಲೋಡ್ ಕೂಡಾ ಮಾಡಬಹುದು. ಆದರೆ ಅಲ್ಲಿ ನಿಮ್ಮ ಹೆಸರು ಕಾಣಿಸುವುದಿಲ್ಲ. ಆಡಿಯೋದ ಅವಧಿ 8 ಸೆಕೆಂಡ್‌ಗಳು. ಪರದೆಯ ಮೇಲೆ ಐದು ಬಟನ್‌ಗಳು ಕಾಣಿಸುತ್ತವೆ. ಇದು ಹಳೆಯ ರೇಡಿಯೊ ಬಟನ್‌ಗಳನ್ನು ನೆನಪಿಸುತ್ತದೆ. ನಿಮ್ಮ ಧ್ವನಿಯನ್ನು ರೆಕಾರ್ಡ್ ಮಾಡಿದ ನಂತರ ಲಿಸನ್ ಬಟನ್ ಒತ್ತಿ ಒಮ್ಮೆ ಪ್ರಾಯೋಗಿಕವಾಗಿ ಕೇಳಿ ತಪ್ಪಿದ್ದರೆ ಸರಿಪಡಿಸಿ ನಂತರ ಅಪ್‌ಲೋಡ್ ಮಾಡಬಹುದು.

## ಇಮೇಜಿಸ್ ಆಫ್ ಚೇಂಜ್

ಇದು ಕೂಡಾ ನಾಸಾದ ಆ್ಯಪ್. ಐಪ್ಯಾಡ್‌ನ ಈ ಆ್ಯಪ್ ಒಂದೇ ಚಿತ್ರದ ಎರಡು ವಿಭಿನ್ನ ಆಯಾಮಗಳನ್ನು ತೋರಿಸುತ್ತದೆ. ಭೂಮಿಯ ದೃಶ್ಯಗಳು ನೈಸರ್ಗಿಕ ಬದಲಾವಣೆ ಹಾಗೂ ಮಾನವರ ಚಟುವಟಿಕೆಗಳಿಂದ ಹೇಗೆ ಬದಲಾದವು ಎಂಬುದನ್ನು ತೋರಿಸುತ್ತದೆ. ನಾಸಾದ ಉಪಗ್ರಹಗಳು ದಶಕಗಳ ಹಿಂದೆ ತೆಗೆದ ಚಿತ್ರಗಳಿಗೂ, ಈಗಿನ ಚಿತ್ರಗಳಿಗೂ ವ್ಯತ್ಯಾಸಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಬೆಂಕಿ, ಮಳೆ, ಪ್ರವಾಹ ಅಥವಾ ಜಾಗತಿಕ ತಾಪಮಾನದಿಂದ ಕರಗುತ್ತಿರುವ ಹಿಮಬಂಡೆಗಳ ಬಗ್ಗೆ ಸ್ಪಷ್ಟ ಚಿತ್ರಣ ಲಭ್ಯ. ನಾಸಾದ ಗ್ಲೋಬಲ್ ಕ್ಲೈಮೇಟ್ ಚೇಂಜ್ ವೆಬ್‌ಸೈಟ್‌ನಲ್ಲಿ ಈ ಚಿತ್ರಗಳು ಸಂಗ್ರಹವಾಗಿವೆ.







## ಪರ್ಟಿನೊ

ಇದು ಕ್ಲೌಡ್ ಆಧಾರಿತ ನೆಟ್‌ವರ್ಕ್ ವೇದಿಕೆ. ಕಂಪ್ಯೂಟರ್, ಪ್ರಿಂಟರ್, ಮೊಬೈಲ್‌ಗಳನ್ನು ನೆಟ್‌ವರ್ಕ್ ಮಾಡಬಹುದು. ಅಂತರ್‌ಜಾಲಕ್ಕೆ ಸಂಪರ್ಕಿಸುವ ಎಲ್ಲಾ ವಿಷಯವೂ ಕ್ಲೌಡ್ ಮೂಲಕ ಇತರ ಸಾಧನಗಳನ್ನು ಸಂಪರ್ಕಿಸುತ್ತದೆ. ನೀವು ಎಲ್ಲೇ ಇರಲಿ, ನಿಮ್ಮ ಸಾಧನಗಳನ್ನು ಅಥವಾ ನೀವು ಸಂಪರ್ಕಿಸಬೇಕಾದ ವ್ಯಕ್ತಿಗಳನ್ನು ಈ ಜಾಲದೊಳಗೆ ತರುತ್ತದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನಲ್ಲಿ ಲಭ್ಯ.

■ ಎಸ್. ತುಂಬೆ